ಕರ್ನಾಟಕ ಸರ್ಕಾರ

KSDH

ತೋಟಗಾರಿಕೆ ಇಲಾಖೆ, ಬೆಂಗಳೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಜೀವಿನಿ-ಕೆಎಸ್ಆರ್ಎಲ್‌ಪಿಎಸ್ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.

ಆರ್‌ಡಿಸಿ-ಇಜಿಎಸ್/671/2022 ದಿನಾಂಕ: 16-11-2022

## ಜಂಟಿ ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸಾಂಬಾರ ಪದಾರ್ಥ ಬೆಳೆಗಳ (Spice Crop) ಪ್ರದೇಶಾಭಿವೃದ್ಧಿಯನ್ನು ಗುಚ್ಛ ಗ್ರಾಮಗಳಲ್ಲಿ (Cluster Villages) ಕೈಗೊಳ್ಳುವ ಕುರಿತು.

***********

ಸಾಂಬಾರ ಬೆಳೆಗಳು ತೋಟಗಾರಿಕೆ ಬೆಳೆಗಳಲ್ಲಿ ಪ್ರಮುಖವಾದ ಬೆಳೆಗಳಾಗಿದ್ದು, ಇವುಗಳಿಂದ ಸಂಸ್ಕರಿಸಿದ ಉತ್ಪನ್ನಗಳು ಪರಿಮಳಯುಕ್ತವಾಗಿರುವುದರಿಂದ ಆಹಾರ ಪದಾರ್ಥಗಳಿಗೆ ಸುವಾಸನೆ (ಪರಿಮಳ) ಮತ್ತು ರುಚಿ ನೀಡಲು ಉಪಯೋಗಿಸುತ್ತಾರೆ. ಸಾಂಬಾರ ಪದಾರ್ಥಗಳ ಸಸ್ಯಗಳ ಪ್ರತಿಯೊಂದು ಭಾಗವು ಉಪಯುಕ್ತವಾಗಿದೆ. (ದಾಲ್ಚಿನಿ-ತೊಗಟೆ, ಜಾಯಿಕಾಯಿ-ತಿರುಳು, ಲವಂಗ-ಹೂ, ಇತರೆ)

ಭಾರತವು ಈಗಲೂ ಸಹ ಸಾಂಬಾರ ಪದಾರ್ಥಗಳ ಉತ್ಪಾದನೆ ಮತ್ತು ಪ್ರದೇಶದಲ್ಲಿ ಅಗ್ರಮಾನ್ಯ ಸ್ಥಾನ ಉಳಿಸಿಕೊಂಡಿದೆ. ಭಾರತವು ಸಾಂಬಾರ ಪದಾರ್ಥಗಳ ತವರು ಎಂದು ಪ್ರಖ್ಯಾತವಾಗಿದೆ. ವಿಶ್ವದಲ್ಲೇ ಭಾರತವು ಸಾಂಬಾರ ಪದಾರ್ಥಗಳ ಮತ್ತು ಉತ್ಪನ್ನಗಳ ಉಪಯೋಗಿಸುವಲ್ಲಿ ಉತ್ಪಾದನೆಯಲ್ಲಿ ಮತ್ತು ರಫ್ತಿನಲ್ಲಿ ಮೊದಲ ಸ್ಥಾನದಲ್ಲಿದೆ.

ಭಾರತದಲ್ಲಿ ಹವಾಗುಣ ಪ್ರದೇಶವು ವೈವಿಧ್ಯಮಯದಿಂದ ಕೂಡಿರುವುದರಿಂದ ವಿಶೇಷವಾಗಿ ಉಷ್ಣವಲಯ, ಸಮಶೀತೋಷ್ಣ ವಲಯ ಮತ್ತು ಶೀತ ವಲಯಗಳಿರುವುದರಿಂದ ಬಹುತೇಕ ಎಲ್ಲಾ ಸಾಂಬಾರ ಬೆಳೆಗಳನ್ನು ಬೆಳೆಯಬಹುದು. ಅದರಂತೆ ಕರ್ನಾಟಕದಲ್ಲಿಯೂ ಸಹ ವೈವಿಧ್ಯಮಯ ಮಣ್ಣು, ಹವಾಗುಣ, ಭೌಗೋಳಿಕ ಸ್ಥಿತಿಗಳು ಮತ್ತು ಕೃಷಿ ಹವಾಗುಣ ವಲಯಗಳಿರುವುದರಿಂದ ವಿವಿಧ ಸಾಂಬಾರ ಬೆಳೆಗಳನ್ನು ಬೆಳೆಯಬಹುದಾಗಿದೆ. ಸಾಂಬಾರ ಪದಾರ್ಥಗಳು ಪೋಷಕಾಂಶಯುಕ್ತ ಆಹಾರ ಪದಾರ್ಥಗಳಾಗಿರುವುದರ ಜೊತೆಗೆ ಔಷಧೀಯವಾಗಿ, ಆರ್ಥಿಕವಾಗಿ, ವಾಣಿಜ್ಯವಾಗಿ ಮತ್ತು ಕೈಗಾರಿಕೋದ್ಯಮಗಳಲ್ಲಿ ಪ್ರಮುಖ್ಯತೆಯನ್ನು ಪಡೆದಿದೆ. ಕರ್ನಾಟಕದಲ್ಲಿ ಪ್ರಸ್ತುತ 3,60,145 ಹೇ. ಪ್ರದೇಶದಲ್ಲಿ 6,65,350 ಮೆ.ಟನ್ ಮಸಾಲೆ ಪದಾರ್ಥಗಳನ್ನು ಉತ್ಪಾದಿಸಲಾಗಿದೆ.

ಸಾಂಪ್ರದಾಯಕವಾಗಿ ಬೆಳೆಯುತ್ತಿದ್ದ ಸಾಂಬಾರ ಪದಾರ್ಥಗಳ ಪ್ರದೇಶಾಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡುವುದು ಇಂದಿನ ಅವಶ್ಯಕತೆಯಿದೆ. ಈ ಕೆಳಕಂಡ ಬಹುವಾರ್ಷಿಕ ಸಾಂಬಾರ ಬೆಳೆಗಳನ್ನು

ಬೆಳೆಯಲು ಗ್ರಾಮೀಣ ಭಾಗದಲ್ಲಿ ವಿಪುಲವಾದ ಅವಕಾಶಗಳಿದ್ದು, ಗ್ರಾಮೀಣ ಜನರ ಆರ್ಥಿಕ ಸುಸ್ಥಿರತೆಗೆ ಒಂದು ಅವಕಾಶವಾಗುತ್ತದೆ. ಈ ನಿಟ್ಟಿನಲ್ಲಿ **ಗ್ರಾಮೀಣಾಭಿವೃದ್ಧಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆ (NRLM) ಜಂಟಿ ಸಹಯೋಗದೊಂದಿಗೆ** ಪ್ರಸ್ತುತ ವರ್ಷ ಅಭಿಯಾನ ರೂಪದಲ್ಲಿ (Mission Mode) ನಲ್ಲಿ ಸ್ಥಳೀಯ ಸ್ವಸಹಾಯ ಸಂಘಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಸಾಂಬಾರ ಬೆಳೆಗಳ ಪ್ರದೇಶವನ್ನು ಗುಚ್ಛ ಗ್ರಾಮಗಳಲ್ಲಿ ವಿಸ್ತರಣೆ ಮಾಡಿ, ಸ್ಥಳೀಯವಾಗಿ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೊಸ ಕಾರ್ಯಕ್ರಮ ರೂಪಿಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ.

| ಕ್ರ.ಸಂ | ಸಾಂಬಾರ ಬೆಳೆ | ವೈಜ್ಞಾನಿಕ ಹೆಸರು |
|---|---|---|
| 1 | ಕರಿಮೆಣಸು (Black pepper) | *Piper nigrum* |
| 2 | ಏಲಕ್ಕಿ (Small Cardamom) | *Elettaria cardamomum* |
| 3 | ಲವಂಗ (Clove) | *Syzygium aromaticum* |
| 4 | ಚಕ್ಕೆ (Cinnamon) | *Cinnamomum verum* |
| 5 | ಜಾಯಿಕಾಯಿ (Nutmeg) | *Myristica fragrans* |
| 6 | ಸರ್ವಸಾಂಬಾರ (All spice) | *Pimenta dioica* |
| 7 | ಪುನರ್‌ಪುಳಿ (Kokum) | *Garcinia indica* |
| 8 | ಚಕ್ರಮೊಗ್ಗು (Star anise) | *Illicium verum* |
| 9 | ತೇಜ್‌ಪತ್ರ (Tej pat) | *Cinnamomum tamala* |
| 10 | ಹುಣಸೆ (Tamarind) | *Tamarindus indica* |

**ಸಾಂಬಾರ ಬೆಳೆಗಳ ಪ್ರಮುಖ್ಯತೆ:**

a) **ಆಹಾರ ಪ್ರಮುಖ್ಯತೆ:** ಸಾಂಬಾರ ಪದಾರ್ಥಗಳು ಮಾನವನ ಆರೋಗ್ಯಕ್ಕೆ ಬೇಕಾಗಿರುವ ಪೋಷಕಾಂಶಗಳ ಆಗರವಾಗಿದ್ದು, ವಿವಿಧ ಅಡುಗೆಗಳಿಗೆ ಬಳಸಲಾಗುತ್ತಿದೆ.

b) **ಕೈಗಾರಿಕೆ ಪ್ರಮುಖ್ಯತೆ:** ಸಾಂಬಾರ ಪದಾರ್ಥಗಳನ್ನು ಹಲವಾರು ಕೈಗಾರಿಕೆ ಪ್ರದೇಶಗಳಲ್ಲಿ ಕಚ್ಚಾ ಸಾಮಗ್ರಿಗಳನ್ನಾಗಿ ಬಳಸಲಾಗುತ್ತದೆ. (ಬಣ್ಣ, ತೈಲ, ಓಲಿಯೊರೇಸಿನ್)

c) **ಆರ್ಥಿಕ ಪ್ರಮುಖ್ಯತೆ:** ಸಾಂಬಾರ ಪದಾರ್ಥಗಳು ರಾಜ್ಯದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

d) **ವಾಣಿಜ್ಯ ಪ್ರಮುಖ್ಯತೆ:** ಬಹುತೇಕ ಸಾಂಬಾರ ಬೆಳೆಗಳನ್ನು ಬಹುವಾರ್ಷಿಕ ಬೆಳೆಗಳ ಮಧ್ಯಭಾಗದಲ್ಲಿ ಅಂತರಬೆಳೆಯಾಗಿ ಬೆಳೆಯಬಹುದು.

e) **ಔಷಧಿಯ ಪ್ರಮುಖ್ಯತೆ:** ಅನಾದಿ ಕಾಲದಿಂದಲೂ ಗಿಡಮೂಲಿಕೆ ಔಷಧಿಗಳನ್ನು ತಯಾರಿಸಲು ಸಾಂಬಾರ ಪದಾರ್ಥಗಳನ್ನು ಕಚ್ಚವಸ್ತುಗಳನ್ನಾಗಿ ಉಪಯೋಗಿಸುತ್ತಿದ್ದು, ಈಗಲೂ ಸಹ ವಿವಿಧ ವೈದ್ಯಕೀಯ ಪದ್ಧತಿಯಲ್ಲಿ ಬಳಸಲಾಗುತ್ತಿದೆ.

ಈ ಬೆಳೆಗಳ ಉತ್ಪಾದನೆಯ ವೆಚ್ಚವು ಗಣನೀಯವಾಗಿ ಕಡಿಮೆ ಪ್ರಮಾಣದಲ್ಲಿದ್ದು, ಬಹುತೇಕ ಈ ಎಲ್ಲಾ ಬೆಳೆಗಳನ್ನು ವರ್ಷಪೂರ್ತಿ ಬೆಳೆಯಬಹುದಾಗಿದೆ ಹಾಗೂ ಗ್ರಾಮೀಣ ಭಾಗದ ರೈತರಿಗೆ ಹಾಗೂ ಸ್ವಸಹಾಯ ಸಂಘದ ಸದಸ್ಯರು ಈ ಚಟುವಟಿಕೆಯಿಂದ ನಿರಂತರವಾಗಿ ಆರ್ಥಿಕ ಸ್ಥಿರ ಆದಾಯ ಪಡೆಯಬಹುದಾಗಿದೆ.

1. <u>ಫಲಾನುಭವಿಗಳ ಆಯ್ಕೆ:</u>

ಅನುಬಂಧ-1

| Sl. No. | Area expansion of Spice Crop | | | | Planting Material Demand and Supply Plan | | |
|---|---|---|---|---|---|---|---|
| | District | No. of clusters | Average Area/Cluster in Acre | Total Area | Planting Material Demand @ 250 Per Acre | Department Nusrary (80%) | GPLF Nursary (20%) |
| 1 | Bagalkote | 2 | 5 | 10 | 2500 | 2000 | 500 |
| 2 | Bengaluru | 4 | 5 | 20 | 5000 | 4000 | 1000 |
| 3 | Bengaluru rural | 5 | 5 | 25 | 6250 | 5000 | 1250 |
| 4 | Belagavi | 15 | 5 | 75 | 18750 | 15000 | 3750 |
| 5 | Ballari | 2 | 5 | 10 | 2500 | 2000 | 500 |
| 6 | Bidar | 5 | 5 | 25 | 6250 | 5000 | 1250 |
| 7 | Vijayapura | 1 | 5 | 5 | 1250 | 1000 | 250 |
| 8 | Chamarajanagara | 10 | 8 | 80 | 20000 | 16000 | 4000 |
| 9 | Chikkaballapura | 4 | 5 | 20 | 5000 | 4000 | 1000 |
| 10 | Chikkamagaluru | 22 | 12 | 264 | 66000 | 52800 | 13200 |
| 11 | Chitradurga | 4 | 5 | 20 | 5000 | 4000 | 1000 |
| 12 | Dakshina kannada | 30 | 12 | 360 | 90000 | 72000 | 18000 |
| 13 | Davanagere | 5 | 5 | 25 | 6250 | 5000 | 1250 |
| 14 | Dharwar | 6 | 5 | 30 | 7500 | 6000 | 1500 |
| 15 | Gadag | 2 | 5 | 10 | 2500 | 2000 | 500 |
| 16 | Kalaburagi | 2 | 5 | 10 | 2500 | 2000 | 500 |
| 17 | Hassan | 15 | 12 | 180 | 45000 | 36000 | 9000 |
| 18 | Haveri | 2 | 5 | 10 | 2500 | 2000 | 500 |
| 19 | Kodagu | 15 | 10 | 150 | 37500 | 30000 | 7500 |
| 20 | Kolar | 2 | 5 | 10 | 2500 | 2000 | 500 |
| 21 | Koppal | 2 | 5 | 10 | 2500 | 2000 | 500 |
| 22 | Mandya | 2 | 5 | 10 | 2500 | 2000 | 500 |
| 23 | Mysuru | 10 | 8 | 80 | 20000 | 16000 | 4000 |
| 24 | Raichur | 2 | 5 | 10 | 2500 | 2000 | 500 |
| 25 | Ramanagara | 5 | 5 | 25 | 6250 | 5000 | 1250 |
| 26 | Shivamogga | 25 | 12 | 300 | 75000 | 60000 | 15000 |
| 27 | Tumakuru | 4 | 5 | 20 | 5000 | 4000 | 1000 |
| 28 | Udupi | 18 | 10 | 180 | 45000 | 36000 | 9000 |
| 29 | Uttara kannada | 25 | 12 | 300 | 75000 | 60000 | 15000 |
| 30 | Vijayanagar | 2 | 5 | 10 | 2500 | 2000 | 500 |
| 31 | Yadgir | 2 | 5 | 10 | 2500 | 2000 | 500 |
| | Total | 250 | | 2294 | 573500 | 458800 | 114700 |

